<u>ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು</u>

ಸಾಕ್ಷಿಯ ಹೆಸರು :- ರಾಮಲಿಂಗಯ್ಯ
ತಂದೆ/ಗಂಡನ ಹೆಸರು :- ಪುಟ್ಟಲಿಂಗಯ್ಯ
ವಯಸ್ಸು :- 38 ವರ್ಷ
ಉದ್ಯೋಗ :- ವ್ಯವಸಾಯ
ವಾಸಸ್ಥಳ :- ದುಂಡನಹಳ್ಳಿ

(ಸಾಕ್ಷಿಗೆ ದಿನಾಂಕಃ02-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

<u>ಮುಖ್ಯ ವಿಚಾರಣೆಃ- ಮಾನ್ಯ ಸಹಾ ಯಕ ಸರ್ಕಾರಿ ಅಭಿಯೋಜಕರವರಿಂದ</u>

ಚಾಸಾ-1 ನಮ್ಮ ಊರಿನವರು. ಚಾಸಾ-2 ಚಾಸಾ-1 ರವರ ಗಂಡ, ಚಾಸಾ- ಚಾಸಾ-4 ಮತ್ತು 5 ರವರ ಪರಿಚಯ ಇಲ್ಲ. ಆರೋಪಿ ಮನ್ನಾವಮಿ ದೊಡ್ಡಿಯವರು. 2024 ರಲ್ಲಿ ಮಧ್ಯಾಹ್ನ 12-00 ಗಂಟೆ ಸಮಯದಲ್ಲಿ, ಚಾಸಾ-1 ರವರು ಖರೀದಿಸಿದ ಜಮೀನಿನಲ್ಲಿ ಚಾಸಾ-1, 2 ಮತ್ತು 4 ರವರು ಸೊಪ್ಪನ್ನು ಕೂಯ್ಯುತ್ತಿದ್ದಾಗ, ಆರೋಪಿ, ಭೀಮ ಮತ್ತು ಪ್ರಸನ್ನ ಎಂಬುವವರು ಏಕಾಕಿ ಜಮೀನಿನ ಬಳಿ ಬಂದು, ಚಾಸಾ-1 ಮತ್ತು 2 ರೊಂದಿಗೆ ಕೈ-ಕೈ ಮಿಲಾಯಿಸಿರುತ್ತಾರೆ. ಚಾಸಾ-1 ಮತ್ತು 2 ರವರಿಗೆ ಆರೋಪಿಯು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆರೋಪಿ, ಭೀಮ ಮತ್ತು ಪ್ರಸನ್ನ ಚಾಸಾ-1 ಮತ್ತು 2 ರವರನ್ನು ಹಿಡಿದು ಹೊಡೆದು ಸದರಿಯವರು ಕೂಯ್ದಿದ್ದ ಸೊಪ್ಪನ್ನು ತೆಗೆದುಕೊಂಡು ಹೋಗಿರುತ್ತಾರೆ. ಚಾಸಾ-4 ಮತ್ತು 5 ರವರು ಬಿಡಿಸಲು ಪ್ರಯತ್ನಿಸಿದ್ದು ನಾನು ಕೂಡಾ ಪ್ರಯತ್ನಿಸಿದ್ದು, ಸದರಿ ಜಗಳ ಬಿಡಿಸಿದ ನಂತರ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ. ಸದರಿ ವಿಚಾರವನ್ನು ನಾನು ಪೊಲೀಸರಿಗೆ ಹೇಳಿದ್ದೇನೆ. ಈಗ ನ್ಯಾಯಾಲಯದ ಮುಂದೆಯಿರುವ ಆರೋಪಿ ಆ ದಿನ ಗಲಾಟೆ ಮಾಡಿದವರಾಗಿರುತ್ತಾರೆ. ಭೀಮಪ್ಪ ಮತ್ತು ಪ್ರಸನ್ನ ಎಂಬುವವರು ಇಲ್ಲ.

**<u>ಪಾಟೀ ಸವಾಲುಃ ಆರೋಪಿ ಪರಶ್ರೀ ಬಿ ಆರ್ ವಕೀಲರವರಿಂದಃ</u>**

ನಮ್ಮ ಊರು ದುಂಡನಹಳ್ಳಿ. ನಮ್ಮ ಊರು ಮನ್ನಾವಮಿ ದೊಡ್ಡಿಯ ನಡುವೆ ಸುಮಾರು 20 ಕಿ ಮೀ ಆಗಿದೆ. ಚಾಸಾ-1 ರವರು ನಮ್ಮ ಊರಿನವರಾಗಿದ್ದು ಮನ್ನಾವಮಿ ದೊಡ್ಡಿಗೆ ಮದುವೆಯಾಗಿರುತ್ತಾರೆ. ಚಾಸಾ-1 ಮತ್ತು 2 ರವರು ನಮ್ಮ ಸಂಬಂಧಿಕರಲ್ಲ ನಾನು ರೇಷ್ಮೆ ಹುಳುಗಳಿಗೆ ಸೊಪ್ಪನ್ನು ಖರೀದಿಸಲು ಹೋಗಿದ್ದೆ. ನನಗೆ ಆರೋಪಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ ಗೊತ್ತಿದೆ. ಸದರಿ ದೂರನ್ನು ಚಾಸಾ-1 ಮತ್ತು 2 ರವರು ದಾಖಲಿಸಿದ್ದು ಆದರೆ ಯಾವಾ ದಿನಾಂಕದಂದು ಏನೆಂದು ನೀಡಿದ್ದಾರೆಂದು ನನಗೆ ಗೊತ್ತಿಲ್ಲ. ಸದರಿ ಗಲಾಟೆಯಾದ ದಿನಾಂಕ ನನಗೆ ಗೊತ್ತಿಲ್ಲ. ಭೀಮಪ್ಪರವರ ಹೆಸರನ್ನು

ಹಿಡಿದು ಕೂಗಾಡಿತ್ತಿದ್ದರಿಂದ ಸದರಿಯವರ ಹೆಸರು ನನಗೆ ಗೊತ್ತಾಗಿದ್ದು ಮುಖ ನೋಡಿದರೆ ಗುರುತಿಸುತ್ತೇನೆ ಆದರೆ ಅವರು ಯಾರೆಂದು ನನಗೆ ಗೊತ್ತಿಲ್ಲ. ಗಲಾಟೆಯಾದ ನಂತರ ಪೊಲೀಸರು ಸ್ಥಳಕ್ಕೆ ಬಂದಿದ್ದರು ಆದರೆ ಸಮಯ ನನಗೆ ಗೊತ್ತಿಲ್ಲ. ಪೊಲೀಸರು ಚಾಸಾ-1 ಮತ್ತು 2 ಮತ್ತು ಆರೋಪಿ ಮತ್ತು ಭೀಮಪ್ಪರವರನ್ನು ಠಾಣೆಗೆ ಕರೆದುಕೊಂಡು ಹೋಗಿದ್ದಾರೆ. ದುಂಡಹನಳ್ಳಿಯಿಂದ ನಾನು ಒಬ್ಬನೇ ಬಂದಿದ್ದು, ಚಾಸಾ-4 ರವರು ಬಂದಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಚಾಸಾ-1 ಮತ್ತು 2 ರವರಿಗೆ ಪುಟ್ಟಿ ಎಂದು ಕೂಗುತ್ತಿದ್ದ ಮತ್ತೊಬ್ಬರು ಇದ್ದರು. ಸದರಿಯವರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಪೊಲೀಸ ಠಾಣೆಗೆ ಹೋಗಿ ನಾನು ಸಹಿ ಮಾಡಿದ್ದು ಸಾಕ್ಷಿಗೆ ಸಹಿ ಮಾಡಿಸಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಪೊಲೀಸರು ಏನು ಬರೆದುಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ. ನಾನು ಸ್ಥಳಕ್ಕೆ ಹೋಗಿರಲಿಲ್ಲ ಮತ್ತು ಸ್ಥಳದಲ್ಲಿ ಯಾವುದೇ ಗಲಾಟೆಯಾಗಿಲ್ಲದಿದ್ದರೂ ಚಾಾ-1 ಮತ್ತು 2 ರವರ ಮಾತನ್ನು ಕೇಳಿಕೊಂಡು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ನಮ್ಮ ಊರಿನ ಹೆಣ್ಣು ಮಗಳಾಗಿದ್ದರಿಂದ ಅವಳಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯವರ ಹೆಸರು ರಾಮಕೃಷ್ಣ ಗಲಾಟೆಯಲ್ಲಿ ಸದರಿ ಹೆಸರನ್ನು ಕೂಗುತ್ತಿದ್ದರು. ಸದರಿಯವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ನನ್ನನ್ನು ಪೊಲೀಸರು ನ್ಯಾಯಾಲಯಕ್ಕೆ ಬರಬೇಕೆಂದು ಹೇಳಿದ್ದರು. ಚಾಸಾ-1 ರವರು ಹೇಳಿಕೊಟ್ಟಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮದ್ದೂರು